# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.

ಸಿ.ಸಿ. ನಂ.108/2020

CW-4/PW-3

| | | |
|---|---|---|
| ಹೆಸರು | : | ಲಕ್ಷ್ಮಣ |
| ತಂದೆ | : | ವೆಂಕಟಯ್ಯ |
| ವಯಸ್ಸು | : | 53 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ ಸ್ಥಳ | : | ಡಣಾಯಕನಪುರ |
| ದಿನಾಂಕ | : | 16-10-2025. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾ ಸಾ 1, 2 ಮತ್ತು 6 ರವರು ಪರಿಚಯ. ಅವರು ನಮ್ಮ ಪಕ್ಕದ ಮನೆಯವರು. 5 ವರ್ಷಗಳ ಹಿಂದೆ ಮಾಯಮ್ಮನವರ ಕತ್ತು ಹಿಸುಕಿ ಚೈನನ್ನು ರಾಮಚಂದ್ರಯ್ಯ ಎನ್ನುವವರು ಕಿತ್ತುಕೊಂಡು ಹೋದರೆಂದು ಮಾಯಮ್ಮ ನನಗೆ ತಿಳಿಸಿದರು. ಆಗ ಸಮಯ ಮಧ್ಯಾಹ್ನ 2.30 ಗಂಟೆ. ನಾವು ಮಾಯಮ್ಮನವರನ್ನು ರಾಮನಗರದ ನಾರಾಯಣ ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆ. ನಂತರ ಮಾಯಮ್ಮನ ಮಗ ಆಸ್ಪತ್ರೆಗೆ ಬಂದರು. ನಂತರ ಏನಾಯಿತು ಎಂದು ಗೊತ್ತಾಗಲಿಲ್ಲ. ಪೊಲೀಸರು ನನ್ನನ್ನು ವಿಚಾರ ಮಾಡಿಲ್ಲ. ರಾಮಚಂದ್ರ ಎಂಬ ಆಸಾಮಿ ನ್ಯಾಯಾಲಯದ ಮುಂದೆ ಆರೋಪಿ ಸ್ಥಾನದಲ್ಲಿ ನಿಂತಿದ್ದಾರೆ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

<u>ಸಿ.ಸಿ. ನಂ.108/2020ರಲ್ಲಿ</u>
CW-4/PW-3

<u>ಪಾಟೀ ಸವಾಲು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಪೊಲೀಸರು ಈ ವಿಚಾರವಾಗಿ ನನ್ನನ್ನು ವಿಚಾರಣೆ ಮಾಡಿದ್ದು ನಾನು ನನ್ನ ಮುಖ ವಿಚಾರಣೆಯಲ್ಲಿ ಹೇಳಿದ ವಿಚಾರವನ್ನು ಪೊಲೀಸರಿಗೆ ಹೇಳಿದ್ದೇನೆ ಅಂದರೆ ಸರಿ. ಮಹೇಶ್ ಎಂಬುವವರು ರಾಮಚಂದ್ರು ಕಿತ್ತುಕೊಂಡು ಹೋದ ಚೈನನ್ನು ರಾಮಚಂದ್ರುರವರಿಂದ ಪಡೆದು ಕೊಟ್ಟಿರುವ ವಿಚಾರ ತಿಳಿಯಿತು ಎಂದು ಸಹ ಹೇಳಿಕೆ ಕೊಟ್ಟಿದ್ದೇನೆಂದರೆ ಸರಿಯಲ್ಲ. ಹೇಳಿಕೆ ಸಂಬಂಧ ಪಟ್ಟ ಭಾಗವನ್ನು **ನಿಪಿ 4** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ವಕೀಲರಿಂದಃ-</u>

ಮಾಯಮ್ಮನವರನ್ನು ಆಸ್ಪತ್ರೆಗೆ ನಾನು ಕರೆದುಕೊಂಡು ಹೋದ ದಿನಾಂಕ, ತಿಂಗಳು ನೆನಪಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಅಂದರೆ ಹೌದು. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.